# ಕಣ್ವ ಡ್ಯಾಮ್

ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ರಾಮನಗರದ ಕೆಂಗಲ್ ಪಕ್ಕದ ಒಳದಾರಿಯಲ್ಲಿ, ಹತ್ತು ಕಿಲೋಮೀಟರ್ ದೂರದಲ್ಲಿ ಕಣ್ವ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಜಲಾಶಯ ಬಹಳಷ್ಟು ಜನರಿಗೆ ಗೊತ್ತಿರುವ ಸಂಗತಿ ಏನಲ್ಲ. 1940ರಲ್ಲಿ ನಿರ್ಮಾಣ ವಾಗಿರುವ ಈ ಜಲಾಶಯ ಒಂದು ಕೃತಕ ಸರೋವರ ಎಂದು ಹೇಳಲಾಗಿದೆ. ಸುತ್ತ ಮುತ್ತಲ ಪ್ರದೇಶದ ನೀರಾವರಿಗೆ ಉಪಯೋಗ ವಾಗುತ್ತಿರುವ ಈ ಜಲಾಶಯ ಗುಡ್ಡಗಳಿಂದ ಆವೃತವಾಗಿದ್ದು, ಸುತ್ತ ಹಲವಾರು ಜಾತಿಯ ದಟ್ಟ ಮರಗಳು ಇವೆ. ಆದರೆ, ಇದನ್ನು ಸದ್ಯ ಸಾರ್ವಜನಿಕ ದರ್ಶನಕ್ಕೆ ಮುಚ್ಚಲಾಗಿದೆ ಎಂದು ಫಲಕ ಹೇಳುತ್ತದೆ. ಸೂಕ್ತ ರೀತಿಯಲ್ಲಿ ಅಭಿವೃದ್ಧಿಪಡಿಸಿದರೆ, ಪುಟ್ಟದಾದ ಪ್ರವಾಸಿ ತಾಣವಾಗಿ ಹೊರಹೊಮ್ಮಬಹುದು. ಸಂಬಂಧ ಪಟ್ಟ ಇಲಾಖೆಗಳು ಇದರ ಬಗ್ಗೆ ಗಮನ ಹರಿಸುವುದು ಒಳ್ಳೆಯದು.

—ಎಂ.ಎಸ್. ರಘುನಾಥ್, ಬೆಂಗಳೂರು





# ಮಣ್ಣಿನ ಮಕ್ಕಳು

ನಮ್ಮ ಸುತ್ತಮುತ್ತಲಿನ ಮೈದಾನ, ಕೃಷಿ ಭೂಮಿ, ಕೆರೆಗಳ ಆಸುಪಾಸಿನಲ್ಲಿ ಹಸು ಎಮ್ಮೆಗಳ ಬಳಿ ಆಹಾರ ಅರಸುತ್ತಾ ಸುತ್ತಾಡುವ ಬೆಳ್ಳಕ್ಕಿಗಳಿಗೆ ಗೋವಕ್ಕಿ, ಜಾನುವಾರು ಬೆಳ್ಳಕ್ಕಿ, ಹಸು ಬೆಳ್ಳಕ್ಕಿ ಎಂಬ ಹೆಸರುಗಳಿವೆ.

ಮೀನು ಮತ್ತು ಕಪ್ಪೆಗಳು ಪ್ರಮುಖ ಆಹಾರ ಆದರೂ ಎಲ್ಲೇ ಮಣ್ಣೆತ್ತುವ ಯಂತ್ರ ಬಂದರೂ ತಕ್ಷಣ ಹಾಜರಾಗುವ ಈ ಹಕ್ಕಿಗಳು ಯಂತ್ರದ ಹಿಂದೆ ಮುಂದೆ ಎಡತಾಕುತ್ತಾ ಚಕ್ರಗಳಿಗೆ, ಕಬಂಧ ಬಾಹುಗಳಿಗೆ ಸಿಲುಕಿಕೊಳ್ಳದೆ ಹುಳ ಹುಪ್ಪಟೆಗಳನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುವ ದೃಶ್ಯ ನೋಡಲು ಸುಂದರವಾಗಿರುತ್ತದೆ.

—ವೇಣುಗೋಪಾಲ ಶರ್ಮಾ, ಗುರುವಾಯನಕೆರೆ

# ಧೋಕ್ರ ಕಲಾಕೃತಿಗಳು

ಮುಂಬೈನ ಛತ್ರಪತಿ ಶಿವಾಜಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆಕರ್ಷಿಸಿದ ಕಲಾಕೃತಿಯಿದು. ಬುಡಕಟ್ಟು ಮಹಿಳೆಯರು ಮನೆಗೆಲಸಗಳಲ್ಲಿ ತಲ್ಲೀನರಾಗಿರುವ ಈ ಕಲಾಕೃತಿಯನ್ನು ಕಂಚಿನಿಂದ ತಯಾರಿಸಿದ್ದಾರೆ.

ಪಶ್ಚಿಮ ಬಂಗಾಳದ ಬುಡಕಟ್ಟು ಜನಾಂಗದವರು ತಯಾರಿಸುವ ಇಂತಹ ಕಲಾಕೃತಿಗಳನ್ನು ‘ದೋಕ್ರ’ ಕಲಾಕೃತಿಗಳೆನ್ನುತ್ತಾರೆ. ಮೂಲತಃ ‘ದೋಕ್ರ’ ಕಲೆ ಪಶ್ಚಿಮ ಬಂಗಾಳದ್ದಾದರೂ, ನಂತರದ ದಿನಗಳಲ್ಲಿ ಕೇರಳ, ಒರಿಸ್ಸಾ, ಛತ್ತೀಸ್‌ಘಡ್ ಹಾಗೂ ರಾಜಸ್ಥಾನಗಳಲ್ಲಿ ಪ್ರಸಿದ್ಧಿ ಪಡೆಯಿತು. ಹೆಚ್ಚಿನ ‘ಧೋಕ್ರ’ ಕಲಾಕೃತಿಗಳು ಪ್ರಾಣಿಗಳ ಅಥವಾ ಮಾನವರ ಪ್ರತಿಮೆಗಳಾಗಿರುತ್ತವೆ. ಕಂಚು ಮತ್ತು ತಾಮ್ರ ಮಿಶ್ರಲೋಹಗಳಿಂದ ತಯಾರಿಸುವ ‘ಧೋಕ್ರ’ ವಿಶ್ವದಾದ್ಯಂತ ಪ್ರಸಿದ್ಧಿಯಾಗಿದೆ.

—ಜಿ. ನಾಗೇಂದ್ರ, ಸಂಡೂರು

